# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 69 ಫ್ರಾ.ಸಾ. : 61**

| | | |
|---|---|---|
| ಸಾಕ್ಷಿಯ ಹೆಸರು | : | ಶಿವಕುಮಾರ ಕೆ. ಆರ್ |
| ತಂದೆಯ ಹೆಸರು | : | ರೇವಣಸಿದ್ದಪ್ಪ |
| ವಯಸ್ಸು | : | 44 ವರ್ಷ |
| ಕೆಲಸ | : | ಪೊಲೀಸ್ ನಿರೀಕ್ಷಕರು,<br>ಆಂತರಿಕ ಭದ್ರತಾ ವಿಭಾಗ, ಉಡುಪಿ |
| ವಾಸ | : | ಉಡುಪಿ |

**ದಿನಾಂಕಃ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ನಾನು ಆಗಸ್ಟ್ 2017 ರಿಂದ ಸೆಪ್ಟೆಂಬರ್ 2019 ರವರೆಗೆ ಕಾರವಾರದ ಪೊಲೀಸ್ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಕಾರವಾರ ಹೆಚ್ಚುವರಿ ಪೊಲೀಸ್ ಅಧಿಕ್ಷಕರ ಮೌಖಿಕ ಆದೇಶದ ಮೇರೆಗೆ, ಈ ಪ್ರಕರಣದ ಕಡತವನ್ನು ದಿ. 22-10-2018 ರಂದು ಕಾರವಾರ ನಗರ ಪೊಲೀಸ್ ಠಾಣೆಯ ಪಿ.ಎಸ್.ಐ. ನವೀನ ನಾಯ್ಕ/ಚಾಸಾ-68 ರವರಿಂದ ಪಡೆದುಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಕಾಣೆಯಾಗಿದಂತಹ ಪ್ರೇಮ್ ಕುಮಾರನ ಮೊಬೈಲನ ಕರೆಗಳನ್ನು ಮಾಹಿತಿಯನ್ನು ಪರಿಶೀಲಿಸಿದಾಗ ಅದರಲ್ಲಿ 2 ನೇ ಆರೋಪಿಯು ಪ್ರೇಮ್ ಕುಮಾರನಿಗೆ ಕರೆ ಮಾಡಿದ್ದು ಕಂಡುಬಂದಿರುತ್ತದೆ. ಆತನ ಮೇಲೆ ಸಂಶಯ ಉಂಟಾಗಿ ಆತನನ್ನು ಪತ್ತೆ ಹಚ್ಚಿ ತರುವಂತೆ ಚಾಸಾ-68, ಚಾಸಾ-45, ಚಾಸಾ-46 ಹಾಗೂ ಇತರರನ್ನು ಎರಡು ತಂಡಗಳನ್ನಾಗಿ ರಚಿಸಿ ದಾಂಡೇಲಿ ಮತ್ತು ಉಳವಿ ಕಡೆಗೆ ಕಳುಹಿಸಿರುತ್ತೇನೆ. ಅದೇ ದಿನ ನಾನು 1 ನೇ ಆರೋಪಿಯ ಮನೆಗೆ ಭೇಟಿ ನೀಡಿ, ಆತನ ಬಗ್ಗೆ ವಿಚಾರಿಸಲಾಗಿ 1 ನೇ ಆರೋಪಿಯು ಮನೆಯಲ್ಲಿ ಸಿಕ್ಕಿರುವುದಿಲ್ಲ ಹಾಗೂ ಆತನ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ.

2. 2 ನೇ ಆರೋಪಿಯ ಪತ್ತೆಗಾಗಿ ಹೋಗಿದ್ದ ಚಾಸಾ-68 ಹಾಗೂ ಅವರ ತಂಡ 2 ನೇ ಆರೋಪಿಯನ್ನು ದಿ. 23-10-2018 ರಂದು ದಾಂಡೇಲಿಯ ಮಾರುತಿ ನಗರದಲ್ಲಿ ಬೆಳಗಿನ ಜಾವ 2.30 ಗಂಟೆಗೆ ವಶಕ್ಕೆ ಪಡೆದು ಕರೆದುಕೊಂಡು ಬಂದು ಬೆಳ್ಳಿಗಿನ ಜಾವ 5.30 ಗಂಟೆಗೆ ಠಾಣೆಯಲ್ಲಿ ನನ್ನ ಸಮಕ್ಷಮ ಹಾಜರು ಪಡಿಸಿದ್ದು, ನಾನು ಆತನಿಗೆ ವಿಚಾರಣೆ ನಡೆಸಿದಾಗ, 1 ನೇ ಆರೋಪಿಯು ಹೇಳಿದಂತೆ ಕಾಣೆಯಾದ ಪ್ರೇಮ್ ಕುಮಾರನನ್ನು 3 ನೇ ಆರೋಪಿಯ ಸಹಾಯದಿಂದ ಕೊಲೆ ಮಾಡಿರುವುದಾಗಿ ಹೇಳಿರುತ್ತಾನೆ. ಆರೋಪಿತರ ಪತ್ತೆಗಾಗಿ ಹೋಗಿದ್ದ ಚಾಸಾ-45 ರ ತಂಡ ಉಳವಿ ಕಡೆಗಳಲ್ಲಿ ಆರೋಪಿತರಿಗಾಗಿ ಹುಡುಕಾಟ ನಡೆಸುತ್ತಿದ್ದು, ನಾನು ಅವರಿಗೆ 3 ನೇ ಆರೋಪಿಯನ್ನು ಪತ್ತೆ ಹಚ್ಚಿ ತರುವಂತೆ ತಿಳಿಸಿರುತ್ತೇನೆ. ಅದರಂತೆ ಚಾಸಾ-45 ರವರ ತಂಡ ಬೆಳಗಿನ ಜಾವ 6.30 ಗಂಟೆಗೆ 3 ನೇ ಆರೋಪಿಯನ್ನು ಉಳವಿಯಲ್ಲಿ ಪತ್ತೆ ಮಾಡಿ, ವಶಕ್ಕೆ ಪಡೆದು ನಂತರ ಠಾಣೆಗೆ ಕರೆದುಕೊಂಡು ಬಂದು ಬೆಳಿಗ್ಗೆ 8.30 ಗಂಟೆಗೆ ನನ್ನ ಸಮಕ್ಷಮ ಹಾಜರು ಪಡಿಸಿದ್ದು, ನಾನು ಆತನಿಗೆ ವಿಚಾರಣೆ ನಡೆಸಿದಾಗ, ಆತ ತಾನು ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಭಾಗಿಯಾಗಿರುವುದಾಗಿ ಹೇಳಿರುತ್ತಾರೆ. ನಂತರ ನಾನು ಸದರಿ ಆರೋಪಿತರಿಗೆ ದಸ್ತಗಿರಿ ನಿಯಮ ಪಾಲಿಸಿರುತ್ತೇನೆ.

3. ಆ ಸಮಯದಲ್ಲಿ ಠಾಣೆಯಲ್ಲಿ ಹಾಜರಿದ್ದ ಮೃತನ ಸಂಬಂಧಿಕರು ಹಾಗೂ ಠಾಣೆಗೆ ದೂರು ನೀಡಲು ಬಂದಿದ್ದ ಚಾಸಾ-2 ಮತ್ತು 3 ರವರ ಸಮಕ್ಷಮ 2 ಮತ್ತು 3 ನೇ ಆರೋಪಿತರನ್ನು ಕೂಲಂಕುಶವಾಗಿ ವಿಚಾರಣೆ ಮಾಡಲಾಗಿ, 2 ಮತ್ತು 3 ನೇ ಆರೋಪಿತರು ಕಾಣೆಯಾದ ಪ್ರೇಮ್ ಕುಮಾರನ ಶವವನ್ನು ಹಾಗೂ ಆತನನ್ನು ಕೊಲೆ ಮಾಡಿದ ಸ್ಥಳ, ಕೃತ್ಯಕ್ಕೆ ಬಳಸಿದ ಆಯುಧಗಳನ್ನು ಕತ್ತಿಗಳನ್ನು ಖರೀದಿಸಿದ ಸ್ಥಳ ಹಾಗೂ ಅವುಗಳನ್ನು ಎಸೆದಿರುವ ಸ್ಥಳ, ಕೃತ್ಯದ ಸಮಯದಲ್ಲಿ ಬಳಸಿದ ವಾಹನಗಳನ್ನು ನಿಲ್ಲಿಸಿಟ್ಟ ಸ್ಥಳಗಳನ್ನು ಮತ್ತು ಮೃತನ ಮೈ ಮೇಲೆ ಇದ್ದ ಬಂಗಾರದ ಚೈನ್, ಬಟ್ಟೆಗಳು, ಶೂ, ಪರ್ಸ್ ಹಾಗೂ ಆರೋಪಿತನು ಧರಿಸಿದ ಬಟ್ಟೆಗಳನ್ನು ತೋರಿಸುವುದಾಗಿ ಹೇಳಿದ್ದು, ಅವರ ಸ್ವಇಚ್ಛೆ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. 2 ಮತ್ತು 3 ನೇ ಆರೋಪಿತರ ಸ್ವಇಚ್ಛಾ ಹೇಳಿಕೆಯ ಭಾಗವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-155 ಹಾಗೂ ನಿಪಿ-156 ಎಂದು ಗುರುತಿಸಲಾಯಿತು.

4. ಆ ನಂತರ ಠಾಣೆಯಲ್ಲಿದಂತ ಚಾಸಾ-2 ಮತ್ತು ಚಾಸಾ-3 ರವರನ್ನು ಪಂಚರಾಗಿ ಬರುವಂತೆ ನೋಟೀಸು ನೀಡಿರುತ್ತೇನೆ. ಕಾರವಾರ ವೈದ್ಯಕೀಯ ಸಂಸ್ಥೆಗೆ ವೈದ್ಯರನ್ನು

ಒದಗಿಸುವಂತೆ ಕೋರಿಕೆ ನೀಡಿರುತ್ತೇನೆ. ಅದರಂತೆ ವೈದ್ಯರು ಹಾಗೂ ಅವರ ಸಿಬ್ಬಂದಿಗಳು ಆಂಬ್ಯುಲೆನ್ಸ್ ನೊಂದಿಗೆ ಠಾಣೆಗೆ ಹಾಜರಾಗಿರುತ್ತಾರೆ. ಆ ನಂತರ ಕಾರವಾರ ನಗರ ಸಭೆಯವರಿಗೂ ಸಹ ತನಿಖೆಗೆ ಸಹಾಯ ಮಾಡಲು ಪೌರ ಕಾರ್ಮಿಕರನ್ನು ಒದಗಿಸುವಂತೆ ಕೋರಿಕೊಂಡಿರುತ್ತೇನೆ. ಆ ನಂತರ ತನಿಖೆಗೆ ಸಹಾಯ ಮಾಡಲು ಡಿ.ಎ.ಆರ್. ಪೊಲೀಸ್ ಸಿಬ್ಬಂದಿಗಳನ್ನು ಹಾಗೂ ಒಂದು ಬಸ್ಸನ್ನು ತರಿಸಿಕೊಂಡಿರುತ್ತೇನೆ. ಆ ನಂತರ ನಾನು ತನಿಖೆಗೆ ಸಹಕರಿಸಲು ನಮ್ಮ ಸಿಬ್ಬಂದಿಗಳಾದ ಚಾಸಾ-43, ಚಾಸಾ-44, ಚಾಸಾ-45, ಚಾಸಾ-46, ಚಾಸಾ-47 ರವರನ್ನು ಹಾಗೂ ಇತರೆ ಸಿಬ್ಬಂದಿಗಳನ್ನು ತನಿಖಾ ಪರಿಕರಗಳೊಂದಿಗೆ, ಮೃತನ ಸಂಬಂಧಿಕರನ್ನು, 2 ಜನ ಪಂಚರನ್ನು, ಪೌರ ಕಾರ್ಮಿಕರನ್ನು ಮತ್ತು 2 ಮತ್ತು 3 ನೇ ಆರೋಪಿತರನ್ನು ಕರೆದುಕೊಂಡು ಡಿ.ಎ.ಆರ್. ಪೊಲೀಸ್ ವಾಹನದಲ್ಲಿ ಮತ್ತು ಒಂದು ಜೀಪ್ ನಲ್ಲಿ ಆರೋಪಿತರು ತೋರಿಸಿದ ಸ್ಥಳಕ್ಕೆ ಬೆಳಗ್ಗೆ 9.45 ಗಂಟೆಗೆ ಠಾಣೆಯಿಂದ ಹೊರಟಿರುತ್ತೇವೆ. ನಮ್ಮೊಂದಿಗೆ ವೈದ್ಯಧಿಕಾರಿಗಳು, ಹಾಗೂ ಅವರ ತಂಡ ಆಂಬ್ಯುಲೆನ್ಸ್ ನಲ್ಲಿ ಬಂದಿರುತ್ತಾರೆ. 2 ಮತ್ತು 3 ನೇ ಆರೋಪಿತರು ಮಾರ್ಗವನ್ನು ತೋರಿಸಿದಂತೆ ಚಿತ್ತಾಕುಲಾ ಮೂಲಕ ಕದ್ರಾ, ಅಣಸಿ ನಂತರ ಮುಂದಕ್ಕೆ ಉಳವಿ ರಸ್ತೆಯಲ್ಲಿ ಹೋಗಿ, ಚೆನ್ನಬಸವೇಶ್ವರ ದೇವಸ್ಥಾನ ದಾಟಿ ಮುಂದಕ್ಕೆ ಹೋದಾಗ, ಪಾರೆಸ್ಟ್ ಚೆಕ್‌ನಾಕ ತಲುಪಿದಾಗ ಆರೋಪಿತರು ವಾಹನವನ್ನು ನಿಲ್ಲಿಸುವಂತೆ ಹೇಳಿ, ವಾಹನದಿಂದ ಕೆಳಗೆ ಇಳಿದು ತಾವು ಮುಂದಾಗಿ ನಡೆದುಕೊಂಡು ಒಂದು ಸಿಮೆಂಟ್ ರಸ್ತೆಯ ಎಡ ಬದಿಗೆ ತಾಗಿರುವ ಅರಣ್ಯ ಪ್ರದೇಶಕ್ಕೆ ಹೋಗುವ ಕಚ್ಚಾ ರಸ್ತೆಯಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಆ ನಂತರ ಸುಮಾರು 2.50 ಕಿ.ಮೀ. ನಡೆದುಕೊಂಡು ಹೋದ ನಂತರ, ಪುನಃ ಮತ್ತೊಂದು ಕಾಲು ದಾರಿಯಲ್ಲಿ 1.50 ಕಿ.ಮೀ. ನಡೆದುಕೊಂಡು ಹೋಗಿ, ಅಲ್ಲಿ ಅರಣ್ಯದ ಇಳಿಜಾರು ಪ್ರದೇಶದಲ್ಲಿನ ಪೊದೆ ಒಳಗೆ ಬಿದಿದ್ದ ಮೃತ ಪ್ರೇಮ್ ಕುಮಾರನ ಶವವನ್ನು ತೋರಿಸಿರುತ್ತಾರೆ.

5. ಆ ನಂತರ ನಾವು ಶವದ ಬಳಿ ಹೋಗಿ ಪರಿಶೀಲಿಸಲಾಗಿ ಸದರಿ ಶವವು ಸ್ವಲ್ಪ ಊದಿಕೊಂಡಿದ್ದು ಹಾಗೂ ಸ್ವಲ್ಪ ಕೊಳೆಯುವ ಸ್ಥಿತಿ ತಲುಪಿರುತ್ತದೆ. ಶವದ ಪಕ್ಕದಲ್ಲಿ ಒಂದು ಬಿಳಿ ಬಣ್ಣದ ಬಟ್ಟೆಯ ತುಂಡು, ಮುಸುಕಾದ ಹಸಿರು-ಬೂದು ಬಣ್ಣದ ಒಂದು ಬಟ್ಟೆಯ ಭಾಗ ಬಿದ್ದಿರುತ್ತದೆ ಹಾಗೂ ಆ ಬಟ್ಟೆಗಳು ಮೃತನಿಗೆ ಸಂಬಂಧಿಸಿದ ಬಟ್ಟೆಗಳಾಗಿರುತ್ತದೆ ಎಂದು ಆರೋಪಿತರು ಹೇಳಿರುತ್ತಾರೆ. ನಂತರ ಶವವನ್ನು ನಮ್ಮೊಂದಿಗೆ ಬಂದಿದ್ದ ಮೃತನ ಸಂಬಂಧಿಕರು

ನೋಡಿ ಗುರುತಿಸಿ, ಸದರಿ ಶವವು ಪ್ರೇಮ್ ಕುಮಾರನ ಶವವಾಗಿರುತ್ತದೆ ಎಂದು ಹೇಳಿರುತ್ತಾರೆ. ಸದರಿ ದಿನಗಳಲ್ಲಿ ಮಳೆ ಬೀಳುತ್ತಿದ್ದ ಕಾರಣ ಶವ ಬಿದ್ದ ಜಾಗವು ತೇವದಿಂದ ಕೂಡಿರುತ್ತದೆ. ನಂತರ ಸ್ಥಳದಲ್ಲಿ ಪಂಚರ ಸಮಕ್ಷಮ ಶವ ಸಿಕ್ಕ ಸ್ಥಳದ ಪಂಚನಾಮೆಯನ್ನು ಬೆಳಗ್ಗೆ 9.45 ರಿಂದ 12.15 ಗಂಟೆಯ ವರೆಗೆ ಮಾಡಿರುತ್ತೇನೆ ಹಾಗೂ ಸ್ಥಳದಲ್ಲಿ ಬಿದಿದ್ದ ಬಟ್ಟೆಗಳನ್ನು ಜಪ್ತು ಪಡಿಸಿಕೊಂಡು, ಸೀಲ್ ಮಾಡಿ, ಅವುಗಳ ಮೇಲೆ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸ್ಥಳದಲ್ಲಿ ಸಿಕ್ಕ ಬಟ್ಟೆಗಳ ಮೇಲೆ ರಕ್ತದ ಕಲೆಗಳು ಕಂಡು ಬಂದಿರುತ್ತದೆ. ಸದರಿ ಪಂಚನಾಮೆಯನ್ನು ಚಾಸಾ-44 ರವರ ಮೂಲಕ ಬರೆಸಿ ಸಹಿ ಮಾಡಿರುತ್ತೇನೆ. ನಂತರ ಸದರಿ ಸ್ಥಳದ ಅಕ್ಷಾಂಶ ಮತ್ತು ರೇಖಾಂಶಗಳನ್ನು ಮೊಬೈಲ್ ಪೋನ್ ಮೂಲಕ ಪರಿಶೀಲಿಸಿ ಅದನ್ನು ಪಂಚನಾಮೆಯಲ್ಲಿ ದಾಖಲಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-43 ರವರು ಠಾಣೆಯಿಂದ ಒದಗಿಸಲಾದ ಕ್ಯಾಮರಾದಿಂದ ಪೋಟೋ ತೆಗೆದಿರುತ್ತಾರೆ. ಸಾಕ್ಷಿಯು ತಾನು ಪಂಚರಿಗೆ ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು 10(ಬಿ) ಎಂದು ಗುರುತಿಸಲಾಯಿತು. ಚಾಸಾ-2 ರವರು ಮೃತಪಟ್ಟಿರುವ ಕಾರಣ ನಿಪಿ-10 ರಲ್ಲಿರುವ ಚಾಸಾ-2 ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಶವ ಸಿಕ್ಕ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-11(ಸಿ) ಎಂದು, ಚಾಸಾ-2 ರ ಸಹಿಯನ್ನು ನಿಪಿ-11(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋಗಳನ್ನು ಈಗಾಗಲೇ ನಿಪಿ-13 ಹಾಗೂ ನಿಪಿ-14 ಎಂದು ಗುರುತಿಸಲಾಗಿರುತ್ತದೆ. ಪಂಚನಾಮೆ ಸಮಯದಲ್ಲಿ ಜಪ್ತು ಪಡಿಸಿಕೊಂಡ ಬಿಳಿ ಬಟ್ಟೆಯ ತುಂಡನ್ನು ಈಗಾಗಲೇ ಎಂ.ಓ-8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-8(ಬಿ) ಎಂದು ಗುರುತಿಸಲಾಯಿತು. ಮುಸುಕಾದ ಹಸಿರು-ಬೂದು ಬಣ್ಣದ ಬಟ್ಟೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-9 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-9(ಬಿ) ಎಂದು ಗುರುತಿಸಲಾಯಿತು.

6. ಆ ನಂತರ ಸ್ಥಳದಲ್ಲಿ ಪಂಚರ ಹಾಗೂ ಮೃತರ ಸಂಬಂಧಿಕರ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿರುತ್ತೇನೆ. ಶವ ಪಂಚನಾಮೆ ಕಾಲದಲ್ಲಿ ಮೃತನ ತಲೆಯ ಬಲ

ಭಾಗದಲ್ಲಿ ಎರಡು ಪ್ರತ್ಯೇಕ ಗಾಯಗಳಿದ್ದು, ಬಲ ಕಿವಿ ಅಂಚು ತುಂಡಾಗಿ ಮಾಂಸ ಕಿತ್ತು ಬಂದಿರುತ್ತದೆ, ಮೂಗಿನ ಭಾಗ ತುಂಡಾಗಿರುತ್ತದೆ, ಮುಖದ ಭಾಗವು ಸ್ವಲ್ಪ ಕೊಳೆತು, ಕಣ್ಣು, ತುಟಿಯ ಭಾಗಗಳು ಹಾಳಾಗಿ ಸ್ವಲ್ಪ ಕೂದಲು ಉದುರಿರುತ್ತದೆ, ಕುತ್ತಿಗೆ ಎಡ ಭಾಗದಲ್ಲಿ ಬಲವಾಗಿ ಹೊಡೆದ ಕತ್ತರಿಸಿದ ಗಾಯಗಳಿರುತ್ತದೆ, ಕುತ್ತಿಗೆಯಲ್ಲಿ ಮೂಳೆಗಳು ಕಾಣುತ್ತಿರುತ್ತವೆ, ಎಡ ಕೈ ಭುಜದಲ್ಲಿ, ಎಡ ಕೈ ಗಂಟಿನಲ್ಲಿ ಕತ್ತರಿಸಿದ ಗಾಯಗಳಾಗಿ ಮಾಂಸ ಕಿತ್ತು ಬಂದಿರುತ್ತದೆ ಹಾಗೂ ಮೂಳೆಗಳು ಕಾಣುತ್ತಿರುತ್ತವೆ, ಎಡ ಕೈ ಕಿರು ಬೆರಳಿನ ಕೆಳ ಭಾಗದಲ್ಲಿ ಗಾಯವಾಗಿ ಮಾಂಸ ಕೊಳೆತ್ತಿರುತ್ತದೆ, ಬಲ ಗೈ ಹಸ್ತದ ಹಿಂಭಾಗದಲ್ಲಿ ಕತ್ತರಿಸಿದ ಗಾಯವಾಗಿ ಮಾಂಸ ಕಿತ್ತು ಬಂದಿರುತ್ತದೆ ಹಾಗೂ ಮೂಳೆಗಳು ಕಾಣುತ್ತಿರುತ್ತದೆ, ಬಲ ಗೈ ಗಂಟಿನ ಬಳಿ ಕತ್ತರಿಸಿದ ಗಾಯವಾಗಿ ಮೂಳೆ ಮುರಿದಿರುತ್ತದೆ, ಮೃತನ ಸೊಂಟದ ಭಾಗದಲ್ಲಿ 25 X 18 ಸೆ.ಮೀ. ಅಳತೆಯ ಕತ್ತರಿಸಿದ ಗಾಯವಾಗಿ, ಮಾಂಸ ಕೊಳೆತಿರುತ್ತದೆ, ಮೂಳೆಗಳು ಕಾಣುತ್ತಿರುತ್ತದೆ ಮತ್ತು ಸ್ವಲ್ಪ ಹುಳಗಳು ಕಾಣುತ್ತಿರುತ್ತವೆ, ಬಲ ಕಾಲಿನ ಪುಷ್ಠ ಭಾಗದಲ್ಲಿ ತರಚಿದ ಗಾಯಗಳಾಗಿರುತ್ತದೆ, ಎಡ ಪುಷ್ಠದ ಮೇಲೆ 2 ಇಂಚು ಉದ್ದದ ಗಾಯವಾಗಿ, ಚರ್ಮ ಕಿತ್ತು ಬಂದಿರುತ್ತದೆ, ಬಲ ಕಾಲಿನ ತೊಡೆ ಹಾಗೂ ಗಂಟಿನ ಭಾಗದಲ್ಲಿ ತರಚಿದ ಗಾಯವಾಗಿರುತ್ತದೆ, ಎಡ ಕಾಲಿನ ಪಾದದ ಮೇಲ್ಭಾಗದ ಗಂಟಿನ ಬಳಿ ಚರ್ಮವು ಕಪ್ಪಾಗಿರುತ್ತದೆ, ವೃಷಣ ಊದುಕೊಂಡಿರುತ್ತದೆ ಹಾಗೂ ಆ ಭಾಗದಲ್ಲಿ ಸಹ ಚರ್ಮ ಕೊಳೆತು ಹುಳುಗಳು ಕಾಣುತ್ತಿರುತ್ತವೆ, ಮೃತನ ಮೈ ಮೇಲೆ ಒಂದು ಸಿವೆಂಟ್ ಬಣ್ಣದ Expando ಎಂದು ಬರೆದಿರುವ ಒಂದು ನಿಕ್ಕರ್, ಬಲಗೈನಲ್ಲಿ ಒಂದು ಕೆಂಪು ಮಿಶ್ರಿತ ಮಾಸಿದ ದಾರ ಇರುತ್ತದೆ. ಸದರಿ ಶವ ಪಂಚನಾಮೆಯನ್ನು 12.30 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯ ವರೆಗೆ ಮಾಡಿದ್ದು, ಅದನ್ನು ಚಾಸಾ–47 ರವರು ಬರೆದಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–15(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋವನ್ನು ನಿಪಿ–16 ಮತ್ತು ನಿಪಿ–17 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಸಾಕ್ಷಿಯು ಮೃತನ ಮೈಮೇಲೆ ಇದ್ದ ನಿಕ್ಕರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–10 ಎಂದು ಗುರುತಿಸಲಾಗಿರುತ್ತದೆ.

7. ಶವ ಪಂಚನಾಮೆ ನಂತರ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡುವಂತೆ ವೈದ್ಯಾಧಿಕಾರಿಗೆ ನಮೂನೆ 146(i) ಮತ್ತು 146(ii) ರಲ್ಲಿ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆಯಲ್ಲಿ ಡಿ.ಎನ್.ಎ. ಪರೀಕ್ಷೆಗಾಗಿ ಮೃತನ ವಿಸೇರಾ ಮತ್ತು ದೇಹದ ಭಾಗಗಳನ್ನು ಸಂಗ್ರಹಿಸಿ ಕೊಡುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಒಟ್ಟಾಗಿ ನಿಪಿ-117 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-117(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ 3 ನೇ ಆರೋಪಿಯು ಸದರಿ ಅರಣ್ಯ ಪ್ರದೇಶದಲ್ಲಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ತಾನು ಪ್ರೇಮ್ ಕುಮಾರನನ್ನು ಕೊಲೆ ಮಾಡುವ ಪೂರ್ವದಲ್ಲಿ ಗಾಂಜ ವ್ಯವಹಾರ ಮಾತನಾಡುವ ಬಗ್ಗೆ ಪ್ರೇಮ್ ಕುಮಾರನ ಕಣ್ಣಿಗೆ ಹಾಗೂ 2 ನೇ ಆರೋಪಿಯ ಕಣ್ಣಿಗೆ ಬಟ್ಟೆಯನ್ನು ಕಟ್ಟಿದ ಸ್ಥಳವನ್ನು ತೋರಿಸಿದ್ದು, ಆ ಸ್ಥಳವು ಶವ ಬಿದ್ದ ಸ್ಥಳದ ದಕ್ಷಿಣ ದಿಕ್ಕಿಗೆ ಸುಮಾರು 210 ಅಡಿ ದೂರದಲ್ಲಿ ಅರಣ್ಯ ಪ್ರದೇಶದ ಮಣ್ಣಿನ ನೆಲವಾಗಿರುತ್ತದೆ ಹಾಗೂ ಸದರಿ ಜಾಗವು ಸ್ವಲ್ಪ ಎತ್ತರದ ದಿಬ್ಬದ ರೀತಿಯಲ್ಲಿ ಇರುತ್ತದೆ. ಮಳೆ ಬಿದ್ದ ಕಾರಣದಿಂದಾಗಿ ಆ ಜಾಗವು ತೇವಾಂಶದಿಂದ ಕೂಡಿರುತ್ತದೆ. ನಂತರ ಆರೋಪಿತರು ಸದರಿ ಸ್ಥಳದಿಂದ ಉತ್ತರಕ್ಕೆ ಸುಮಾರು 60 ಅಡಿ ದೂರ ನಡೆದುಕೊಂಡು ಹೋಗಿದ್ದು, ಅಲ್ಲಿ 3 ನೇ ಆರೋಪಿಯು ನಾವು ಇದೇ ಸ್ಥಳಕ್ಕೆ ಬಂದಾಗ 2 ನೇ ಆರೋಪಿಯ ಕಣ್ಣಿಗೆ ಕಟ್ಟಿದ ಬಟ್ಟೆಯನ್ನು ಬಿಚ್ಚಿ , ಆ ನಂತರ ನಾವಿಬ್ಬರು ಕತ್ತಿಗಳಿಂದ ಪ್ರೇಮ್ ಕುಮಾರನ ಮೇಲೆ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿದ್ದು, ಸದರಿ ಸ್ಥಳವು ಶವ ಬಿದ್ದ ಸ್ಥಳದಿಂದ ದಕ್ಷಿಣ ದಿಕ್ಕಿಗೆ 150 ಅಡಿ ದೂರದಲ್ಲಿರುತ್ತದೆ ಮತ್ತು ಆರೋಪಿತರು ಪ್ರೇಮ್ ಕುಮಾರನ ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳದಿಂದ ಉತ್ತರ ದಿಕ್ಕಿಗೆ ಸುಮಾರು 60 ಅಡಿ ಅಂತರದಲ್ಲಿ ಮಣ್ಣಿನ ಸ್ಥಳವಾಗಿರುತ್ತದೆ. ಸದರಿ ಸ್ಥಳದಲ್ಲಿ ಗಿಡ-ಗಂಟಿಗಳು ಮತ್ತು ಸಣ್ಣ ಪೊದೆಗಳು ಭಾಗಿದ್ದು, ಅಲ್ಲಲ್ಲಿ ಮಣ್ಣಿನ ನೆಲವು ತಿಕ್ಕಿದ ನಮೂನೆಯಲ್ಲಿ ಕಂಡು ಬಂದಿರುತ್ತದೆ. ಈ ಸ್ಥಳದಿಂದ ಉತ್ತರ ದಿಕ್ಕಿಗೆ ಶವ ಇರುವ ಸ್ಥಳದ ವರೆಗೆ ಇಳಿಜಾರಿನಲ್ಲಿ ಅಲ್ಲಲ್ಲಿ ಗಿಡ-ಗಂಟಿಗಳು, ಪೊದೆಗಳು ಇಳಿಮುಖವಾಗಿ ಭಾಗಿರುವ ಮತ್ತು ಮಣ್ಣಿನಲ್ಲಿ ಜಾರಿಕೊಂಡು ಹೋದ ಕುರುಹುಗಳು ಕಂಡು ಬಂದಿರುತ್ತದೆ. ಸದರಿ ಸ್ಥಳವನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿ, ಸದರಿ ಸ್ಥಳದಲ್ಲಿ ಮಳೆ ಬಿದ್ದಿರುವ ಸಾಧ್ಯತೆ ಇದ್ದು, ಮಣ್ಣು ತೇವಾಂಶದಿಂದ ಕಂಡು ಬಂದಿರುತ್ತದೆ ಹಾಗೂ ಅಲ್ಲಿ ಯಾವುದೇ ರಕ್ತದ ಕಲೆಗಳು ಕಂಡು ಬಂದಿರುವುದಿಲ್ಲ. ಸದರಿ ಸ್ಥಳಗಳನ್ನು ಪರಿಶೀಲಿಸಿದ ನಂತರ 2.15 ರಿಂದ 2.45 ರವರೆಗೆ ನಿಪಿ-18 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ. ಚಾಸಾ-46 ರವರು ಪಂಚನಾಮೆಯನ್ನು

ಬರೆದಿರುತ್ತಾರೆ. ನಿಪಿ–18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–18(ಸಿ) ಎಂದು ಗುರುತಿಸಲಾಯಿತು. ಚಾಸಾ–2 ರ ಸಹಿಯನ್ನು ನಿಪಿ–18(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋವನ್ನು ಈಗಾಗಲೇ ನಿಪಿ–19 ಮತ್ತು ನಿಪಿ–20 ಎಂದು ಗುರುತಿಸಲಾಗಿರುತ್ತದೆ.

8. ಆ ನಂತರ 3 ನೇ ಆರೋಪಿಯು ನಮ್ಮನ್ನು ಶವ ಬಿದ್ದ ಸ್ಥಳದಿಂದ ಕರೆದು ಕೊಂಡು ಬಂದು ತಾವು ಕೊಲೆ ಮಾಡು ಪೂರ್ವದಲ್ಲಿ ಮೋಟರ್ ಸೈಕಲ್ ಚಲಾಯಿಸಿಕೊಂಡು ಬಂದು ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವು ಶವ ಬಿದ್ದಿರುವ ಸ್ಥಳಕ್ಕೆ ಹೋಗಲು ಇರುವ ಕಾಲು ದಾರಿಯಿಂದ ದಕ್ಷಿಣಕ್ಕೆ ಸುಮಾರು 240 ಅಡಿ ದೂರದಲ್ಲಿ ಕಚ್ಚ ರಸ್ತೆಯಲ್ಲಿ ವಾಹನಗಳನ್ನು ತಿರುಗಿಸಲು ಮಾಡಿರುವ ಸ್ಥಳದಲ್ಲಿ ರಸ್ತೆಯ ಪೂರ್ವ ಬದಿಗೆ ಇರುತ್ತದೆ. ಸದರಿ ಸ್ಥಳದ ಮಣ್ಣಿನ ನೆಲದಲ್ಲಿ ವಾಹನಗಳ ಟಯರ್ ಗಳ ಗುರುತು ಕಂಡು ಬರುತ್ತದೆ. ಆದರೆ ಸ್ಥಳದಲ್ಲಿ ಮೋಟರ್ ಸೈಕಲ್ ಇರುವುದಿಲ್ಲ, ನಂತರ ನಾನು ಸದರಿ ಸ್ಥಳವನ್ನು ಪರಿಶೀಲಿಸಿ ಪಂಚರ ಸಮಕ್ಷಮ ಮಧ್ಯಾಹ್ನ 3.15 ರಿಂದ 3.45 ರವರೆಗೆ ನಿಪಿ–21 ರಂತೆ ಪಂಚನಾಮೆ ಮಾಡಿ, ನಿಪಿ–22 ಮತ್ತು ನಿಪಿ–23 ರಂತೆ ಪೋಟೋ ತೆಗೆದಿರುತ್ತೇನೆ. ಚಾಸಾ–46 ರವರು ಪಂಚನಾಮೆಯನ್ನು ಬರೆದಿರುತ್ತಾರೆ. ನಿಪಿ–21 ರಲ್ಲಿರುವ ಸಾಕ್ಷಿಯನ್ನು ಸಹಿಯನ್ನು ನಿಪಿ–21(ಸಿ) ಎಂದು, ಚಾಸಾ–2 ರ ಸಹಿಯನ್ನು ನಿಪಿ–21(ಡಿ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ